**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್</u>.**

ಸಿ.ಸಿ.ನಂ.4404/2023

ಪಿ.ಡಬ್ಲ್ಯೂ -10

ಸಿ.ಡಬ್ಲ್ಯೂ-10

**<u>ಸಾಕ್ಷಿಗೆ ದಿಃ 02.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು</u>.**

**ಆರೋಪಿ ಪರ ಪಾಟೀ ಸವಾಲುಃ ಬಿ. ಆರ್.ಆರ್ ವಕೀಲರಿಂದಃ**

ಎಫ್.ಐ. ಆರ್ ಅನ್ನು ಮಾಡುವ ಮೊದಲು ದೂರನ್ನು ಓದಿ ಪರಾಮರ್ಶಿಸಿಕೊಂಡಿರುತ್ತೇನೆ. ದೂರಿನಲ್ಲಿ ಕುರಿಗಳನ್ನು ಮೇಯಿಸಿರುವ ಬಗ್ಗೆ ಬರೆಯಲಾಗಿದ್ದು ಈ ಬಗ್ಗೆ ಸ್ಥಳಕ್ಕೆ ಬೇಟಿ ನೀಡಿದಾಗ ಅದನ್ನು ಪರಿಶೀಲಿಸಿ ಮಹಜರನಲ್ಲಿ ನಮೂದು ಮಾಡಿದ್ದಿರಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಪಹಣಿ ಪತ್ರಿಕೆಯಲ್ಲಿರುವ ಖಾತೆದಾರರಿಗೂ ದೂರುದಾರರಿಗೂ ಏನು ಸಂಬಂದವೆಂದು ಅಂತಿಮ ವರದಿಯಲ್ಲಿ ಎಲ್ಲಿಯೂ ಸಹ ನಮೂದು ಮಾಡಿಲ್ಲವೆಂದರೆ ಸರಿ. ಮಹಜರನಲ್ಲಿ ಘಟನಾ ಸ್ಥಳದ ಸರ್ವೆ ನಂಬರ ನಮೂದು ಮಾಡಿಲ್ಲ ಮತ್ತು ನಮೂದು ಮಾಡಲು ತೊಂದರೆ ಇರಲಿಲ್ಲ.

ಪಹಣಿ ಪತ್ರಿಕೆಯಲ್ಲಿರುವ ವ್ಯಕ್ತಿಗೂ ಚಾಸಾ 1 ಅವರಿಗೂ ಅವರ ತಂದೆಗೂ ಗಂಡನಿಗೂ ಏಿ ಸಂಬಂದವೆಂದರೆ ಸದರ ಜಮೀನು ಕುರಿ ಮೇಯಿಸುವ ವಿಚಾರಕ್ಕೆ ಪಹಣಿ ಪತ್ರಿಕೆಯನ್ನು ಸಲ್ಲಿಸಿರುತ್ತೇನೆಂದು ಹೇಳುತ್ತಾರೆ. ಪಹಣಿ ಪತ್ರಿಕೆಯಲ್ಲಿ ತೋರಿಸಿರುವ ವ್ಯಕ್ತಿಗಳು ಯಾರು ಸಾಕ್ಷಿದಾರರು ಆಗಿರುವುದಿಲ್ಲವೆಂದರೆ ಸರಿ. ಪಹಣಿ ಪತ್ರಿಕೆಯಲ್ಲಿರುವ ವ್ಯಕ್ತಿಗಳು ಯಾರು ದೂರನ್ನು ನೀಡಿರುವುದಿಲ್ಲ.

ದೂರಿನಲ್ಲಿ 7 ಗಾಯಗಳನ್ನು ತೋರಿಸಿದ್ದು ಗಾಯದ ಪ್ರಮಾಣ ಪತ್ರದಲ್ಲಿ 2 ಗಾಯಗಳೆಂದು ತೋರಿಸಿದ್ದು ಯಾವುದು ಸತ್ಯವೆಂದರೆ ಸಾಕ್ಷಿ ಗಾಯದ ಪ್ರಮಾಣ ಪತ್ರದಲ್ಲಿರುವುದು ಸತ್ಯವೆಂದು ಹೇಳುತ್ತಾರೆ. ಸದರಿ ಗಾಯಗಳ ವಿಚಾರವಾಗಿ ನಾನು ಗಾಬರಿಯಲ್ಲಿ ತಪ್ಪಾಗಿ ನಮೂದು ಮಾಡಿರುತ್ತೇನೆಂದು ಯಾರು ಸಹ ಹೇಳಿಕೆ ಹೇಳಿರುವುದಿಲ್ಲ.

ಸ್ಥಳಕ್ಕೆ ಬೇಟಿ ನೀಡಿ ಮಹಜರ ಮಾಡಿದ ಸಮಯದಲ್ಲಿ ಆರ್.ಟಿ.ಸಿ ಯಲ್ಲಿರುವ ವ್ಯಕ್ತಿಗಳ ಸಹಿಯನ್ನು ಪಡೆದಿರುವುದಿಲ್ಲ ಮತ್ತು ಪಡೆಯಲು ತೊಂದರೆ ಇರಲಿಲ್ಲ. ಮಹಜರನ ಎಲ್ಲಾ ಪುಟಗಳಿಗೆ ಸಹಿ ಮಾಡಲು ತೊಂದರೆ ಇರಲಿಲ್ಲ. ಮೊದಲ ಮತ್ತು ಕೊನೆಯ ಪುಟಕ್ಕೆ ಸಹಿ ಪಡೆದಿರುತ್ತೇನೆಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು. ಮಾ. 4 ಅಡಿ ಇರಬಹುದೆಂದು ಹೇಳುತ್ತಾರೆ. ಮಹಜರನಲ್ಲಿ ಮು. ಮಾ. ನ ಅಳತೆ 3 ಅಡಿ ಎಂದು ನಮೂದು ಮಾಡಿರುತ್ತೀರಿ ಎಂದರೆ ಸರಿ.

ಗಾಯದ ಪ್ರಮಾಣ ಪತ್ರದಲ್ಲಿ ಘಟನೆ ಆದ ಸ್ಥಳ ಹಲ್ಲೆ ಮಾಡಿದ ವ್ಯಕ್ತಿ ಮತ್ತು ಆಯುದದ ಬಗ್ಗೆ ನಮೂದು ಇಲ್ಲ ಈ ಬಗ್ಗೆ ಎಂ.ಎಲ್.ಸಿ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಎಂ.ಎಲ್.ಸಿ ಯನ್ನು ಪರಿಶೀಲನೆ ಮಾಡಿದ್ದು ಅದರಲ್ಲಿ ಯಾವುದೇ ವಿವರಣೆ ಇರಲಿಲ್ಲವೆಂದು ಹೇಳುತ್ತಾರೆ. ದೂರಿನಲ್ಲಿ ನಾಗಸಂದ್ರ ಮತ್ತು ಕುಣಗಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಹೇಳಿದ್ದು ನಾನು ಒಂದು ಆಸ್ಪತ್ರೆಗೆ ಬೇಟಿ ನೀಡಿ ಪರಿಶೀಲನೆ ಮಾಡಿರುತ್ತೇನೆ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ಚಾಸಾ 1 ಅವರು ಸುಳ್ಳು ದೂರನ್ನು ನೀಡಿದ್ದು ನಾನು ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬರೆದಿದ್ದೇನೆಂದು ಹೇಳುವ ಮಹಜರನ್ನು ಸಹ ಠಾಣೆಯಲ್ಲಿಯೇ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 1 ಅವರು ಸೇರಿ ಮು. ಮಾ. ಗಳನ್ನು ಈ ಪ್ರಕರಣಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಮತ್ತು ಚಾಸಾ 1 ಅವರ ಮರು ಹೇಳಿಕೆಯನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಲಾಗಿದೆ ಎಂದರೆ ಸರಿಯಲ್ಲ.

ಯಾವುದೇ ಹಲ್ಲೆ ಆಗದೇ ಇದ್ದರೂ ಸಹ ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಊರಿನಲ್ಲಿದ್ದರೂ ಸಹ ತಲೆಮರಿಸಿಕೊಂಡಿರುತ್ತಾರೆಂದು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.